SRI S. R. BOMMAI.—Sir. though the intention of the Government is very poised, the notification is to be read along with the rules of the Public Service Commission, because there is a specific rule which states that the interview be called in a particular order. Supposing if the interview is called for candidates obtaining 60 percent. 50 percent, how can these candidates be called under the existing rules? Even it will be the same in the case of candidates belong to Scheduled Caste and backward class and if there are much more candidates who obtaind 60% as such they will get the interview and others will not be legally entitled for an interview. That is the whole difficulty. Government must also appreciate the difficulty of the Public Service Commission. Though you had the discussion with the Chairman of the Public Service Commission in this regard. the rules of the Public Service Commission say that they have to call for interview according to the merit. That is the interpretation of the Public Service Commission. Therefore, the Government will have to amend the recruitment rules to abserb the candidates. That is one thing. It is also being done in Maharashtra and Andhra and they have absorbed all the candidates. Therefore, I request the Government to amend the rules and all these candidates should be absorbed immediately or they may be absorbed directly by making a Special Government Order. This may be done within two weeks.

SRI B. SUBBAYYA SHETTY.—Sir, it has been asked how it is going to be implemented. It is being implemented by an amendment to the recruitment rules. It is not a direction. Once the notification goes, it is deemed to have effect. Because the amendment to the recruitment rules is a part and parcel of the recruitment rules. So, this is what we have done to implement. And again it has been said that myself and the Chairman have come to the conclusion that the matter be referred to Legal Department for its opinion. And then regarding our Hon. Member Mr. Deve Gowda's suggestion I will get it examined.

2-30 P.M.

Question of breach of Priviiege

(*re: remarks in the Samyukta Karnataka Editorial on 6th July 1978.*)

† ಶ್ರೀ ಗೋವಿಂದ ಪಿ. ಒಡೆಯರಾಜ್ (ಕಮಲಪುರ).—ಮಾನ್ಯ ಸಭಾಧ್ಯಕ್ಷರೇ, ಬಹಳ ದುಃಖದಿಂದ ಮತ್ತು ಅತ್ಯಂತ ವ್ಯಥೆಯಿಂದ ಈ ವಿಷಯವನ್ನು ನಾನು ಪ್ರಸ್ತಾಪ ಮಾಡಬೇಕಾಗಿ ಬಂದಿದೆ. ಇವತ್ತಿನ ದಿನದ ಬೆಂಗಳೂರು ಪ್ರಕಾಶನದ "ಸಂಯುಕ್ತ ಕರ್ನಾಟಕ" ಪತ್ರಿಕೆಯಲ್ಲಿ, ಪತ್ರಿಕೆಯ ಸಂಪಾದಕರು ತಮ್ಮ ಸಂಪಾದಕೀಯದಲ್ಲಿ ವಿಧಾನ ಮಂಡಲ ಹೇಗೆ ಕೆಲಸ ಮಾಡುತ್ತಿದೆ, ವಿಧಾನ ಮಂಡಲ ಕೆಲಸ ತೀರಾ ಅಪಮಾನಕರವಾದುದು ಎನ್ನುವ ದಾಟಿಯಲ್ಲಿ ಬಹಳ ತೀವ್ರತೆಯಿಂದ ಟೀಕೆ ಮಾಡಿದ್ದಾರೆ. ಇದನ್ನು ಓದುವವರು-ಯಾರೇ ಆಗಿರಲಿ- ಬಹಳ ಮನಸು ನೊಂದುಕೊಂಡು ಮಾತನಾಡಬೇಕಾಗುತ್ತದೆ.

ಏಕೆಂದರೆ, ನಾವು ವಿಧಾನ ಮಂಡಲದಲ್ಲಿ ಕೆಲಸ ಮಾಡುತ್ತಿರುವುದು ಜನರ ಸೇವೆ ಮಾಡುವುದಕ್ಕಾಗಿ ಮತ್ತು ಅದರ ಹಿತಕ್ಕಾಗಿ. ಆದರೆ, ತಮ್ಮ ಸಂಪಾದಕೀಯದಲ್ಲಿ ಸಂಪಾದಕರು ಈ ರೀತಿ ಹೇಳಿದ್ದಾರೆ. ''ಅಲೋಚಿಸಬೇಕಾದ ಸಂಗತಿ'' ಎನ್ನುವ ಶೀರ್ಷಿಕೆಯಲ್ಲಿ

> ''ವಿಧಾನ ಮಂಡಲದ ಕಾರ್ಯಕಲಾಪಗಳು ಇತ್ತೀಚೆಗೆ ಸುಗಮವಾಗಿ ಸಾಗುವುದಕ್ಕಿಂತ ಅಡ್ಡಿ ಆತಂಕಗಳಿಗೇ ಹೆಚ್ಚಾಗಿ ಒಳಗಾಗುತ್ತಿರುವುದು ಗಂಭೀರವಾಗಿ ಆಲೋಚಿಸಬೇಕಾದ ವಿಷಯ. ಸರಕಾರದ ಕಾರ್ಯಕ್ಕೆ ಕ್ಷಕಿರಣ ಹಿಡಿಯು ಅದರಲ್ಲಿಯ ಲೋಪದೋಷಗಳನ್ನು ಎತ್ತಿ ತೋರಿಸುವುದು ವಿರೋಧಿ ಪಕ್ಷಗಳು ಮಾಡಬೇಕಾದ ಕೆಲಸಗಳಲ್ಲೊಂದು, ಆದರೆ ಹಾಗೆಂದು ಸದಾ ಕಾಲ ಛಿದ್ರಾನ್ವೇಷಣೆಯಲ್ಲೇ ಮಗ್ನರಾಗಬೇಕೆ ? ಕೆಲವರಂತೂ ಸಭೆಯ ಕಾರ್ಯಕಲಾಪಗಳು ಮುನ್ನಡೆಯದಂತೆ ಅಡ್ಡಿಯೊಡ್ಡುವುದು ಮಹಾ ಪುರುಷಾರ್ಥವೆಂದು ಭಾವಿಸಿರುವಂತಿದೆ. ಇತ್ತೀಚಿನ ಕಾರ್ಯಕಲಾಪಗಳ ವರದಿಗಳನ್ನು ಸ್ಥೂಲವಾಗಿ ಪರಿಶೀಲಿಸಿದರೂ ಅದರಲ್ಲಿ ಉಚಿತ ವಿಷಯಗಳ ಚರ್ಚೆಗಿಂತ ಅನುಚಿತ ವಾಗ್ಯುದ್ಧ, ಚಕಮಕಿಗಳಲ್ಲಿಯೇ ಹೆಚ್ಚಿನ ಕಾಲ ಸವೆದದ್ದು ಕಂಡುಬರುತ್ತದೆ. ಆಗಾಗ ಸಭಾಧ್ಯಕ್ಷರು ಸಭೆಯ ಗೌರವಕ್ಕೆ ತಕ್ಕುದಲ್ಲದ ಕಾರ್ಯಕಲಾಪಗಳು ನಡೆದುದನ್ನು ಗಮನಿಸಿ ಅವುಗಳನ್ನು ಸಭೆಯ ದಾಖಲೆಗಳಿಂದ ತೆಗೆದು ಹಾಕುವ ಪ್ರಸಂಗ ಬರುತ್ತದೆ. ಇವೆಲ್ಲ ಯಾರಿಗೂ ಮರ್ಯಾದೆ ತರುವ ಅಂಶಗಳಲ್ಲ. ಸರಕಾರ ಹಣದ ವೆಚ್ಚದಲ್ಲಿ ಮಿತವ್ಯಯವನ್ನಾಗಲೀ, ಸದ್ವಿನಿಯೋಗವನ್ನಾಗಲೀ ತೋರಿಸುವುದಿಲ್ಲವೆಂದು ಟೀಕಿಸುವ ಸದಸ್ಯರು ತಾವೇ ಹಣದ ಅಪವ್ಯಯಕ್ಕೆ ಕಾರಣರಾಗುವುದರೆಂಬುದನ್ನು ಆಲೋಚಿಸುವಂತೆ ತೋರುವುದಿಲ್ಲ.
>
> ಶಾಸಕರು ವಿಧಾನ ಮಂಡಲದ ಅಧಿವೇಶನದಲ್ಲಿ ಕಳೆಯುವ ಪ್ರತಿಯೊಂದು ಕ್ಷಣಕ್ಕೂ ತೆರಿಗೆದಾರನು ಹಣ ತೆರುತ್ತಿದ್ದಾನೆ. ತನ್ನ ಮತ ಪಡೆದು ಆಯ್ಕೆ ಹೊಂದಿದ ಶಾಸಕರು ತನ್ನ ತೆರಿಗೆಯ ಸದ್ವಿನಿಯೋಗ ಮಾಡುತ್ತಿರುವರೆಂಬ ಭರವಸೆ ಮತದಾರರಲ್ಲಿ ಮೂಡಬೇಡವೇ ? ''.

ಸಂಯುಕ್ತ ಕರ್ನಾಟಕ ಪತ್ರಿಕೆಯ ಸಂಪಾದಕರು ವಿಧಾನ ಮಂಡಲದ ಕಾರ್ಯಕಲಾಪಗಳನ್ನು ಗಮನದಲ್ಲಿಟ್ಟುಕೊಂಡು ಟೀಕಿಸಿದ್ದಾರೆ. ವಿಧಾನ ಮಂಡಲ ಎಂದರೆ ವಿಧಾನ ಸಭೆ ಕೂಡ ಬರುತ್ತದೆ. ವಿಧಾನ ಸಭೆ ಕೆಲಸ ಮಾಡುತ್ತಿರುವುದು ಜನರ ಸಲುವಾಗಿ, ಹಾಗೆ ನಾವು ಕೆಲಸ ಮಾಡುತ್ತಿರುವಾಗ...

ಶ್ರೀ ಕೆ. ಎಚ್. ರಂಗನಾಥ್.—ಸಂಪಾದಕರು ತಮ್ಮ ಪತ್ರಿಕೆಯಲ್ಲೊಂದು ಅಗ್ರಲೇಖನವನ್ನು ಬರೆದಿದ್ದಾರೆ. ಅದಕ್ಕಾಗಿ ಮಾನ್ಯ ಸದಸ್ಯರು ಇಲ್ಲಿ ಚರ್ಚೆ ಮಾಡಲು ನೋಟಿಸ್ ಕೊಟ್ಟಿದ್ದಾರೆ. ಈ ಸದನದ ಹಕ್ಕು ಬಾಧ್ಯತೆಗಳನ್ನು ಕಾಪಾಡುವುದರಲ್ಲಿ ಎಲ್ಲರೂ ಒಂದಾಗಿರಬೇಕೆನ್ನುವುದರಲ್ಲಿ ನನ್ನಲ್ಲಿ ಭಿನ್ನಾಭಿಪ್ರಾಯವಿಲ್ಲ. ಆದರೆ, ಮಾನ್ಯ ಸದಸ್ಯರು ''ಟೀಕಿಸಿದ್ದಾರೆ'' ಎನ್ನುವ ಪದವನ್ನು ಬಳಸುತ್ತಿದ್ದಾರೆ. ಮಾನ್ಯ ಅಧ್ಯಕ್ಷರು ಹಕ್ಕು ಬಾಧ್ಯತಾ ಚ್ಯುತಿ ನಿರ್ಣಯಕ್ಕೆ ಒಪ್ಪಿಗೆ ಕೊಟ್ಟಮೇಲೆ ಮತ್ತು ಆ ವಿಷಯ ಚರ್ಚೆಗೆ ಬಂದಮೇಲೆ, ಮಾನ್ಯ ಸದಸ್ಯರು ಅದಕ್ಕೆ ಸಂಬಂಧಿಸಿದ ಹೇಳಿಕೆಯನ್ನು ಕೊಡಬೇಕೆಂದಿದೆ; ಆಗ ಅವರು ಸಮರ್ಥನೆ ಮಾಡಲಿ. ನಾವಿಂದು ಪತ್ರಿಕಾ ಸ್ವಾತಂತ್ರ್ಯದ ಬಗ್ಗೆ ಮಾತನಾಡುತ್ತಿದ್ದೇವೆ. ಇಂದು ಪ್ರಕಟವಾಗಿರುವ ಅಗ್ರ ಲೇಖನ ಮಾನ್ಯ ಸದಸ್ಯರಿಗೆ ಟೀಕೆಯಾಗಿ ಕಾಣಬಹುದು, ನನಗೆ ಅದು ಅಭಿಪ್ರಾಯವಾಗಿ ಕಾಣಬಹುದು, ಜನಸಾಮಾನ್ಯರಿಗೆ ಇನ್ನೇನೋ ಕಾಣಬಹುದು. ಅವರ ಇವರಅಭಿಪ್ರಾಯಕ್ಕೆ ತಕ್ಕಂತೆ ಅದು ಕಾಣುತ್ತದೆ. ಆದುದರಿಂದ, ನಾವಿನ್ನೂ ಈ ವಿಚಾರವನ್ನು ಚರ್ಚೆಗೆ ತೆಗೆದುಕೊಂಡಿಲ್ಲ. ಪ್ರಜಾಪ್ರಭುತ್ವದಲ್ಲಿ ಹೆಚ್ಚು ಆಧ್ಯತೆಯನ್ನು ಪತ್ರಿಕೆಗಳಿಗೆ ಕೊಡುತ್ತಿದ್ದೇವೆ. ಅದರಲ್ಲೂ ಪತ್ರಿಕೆಗಳಲ್ಲಿ ಬರುವ ಅಗ್ರಲೇಖನಕ್ಕೆ ಮಾನ್ಯತೆ ಕೊಡುತ್ತೇವೆ. ಅದುದರಿಂದ, ನಮ್ಮ ಸದಸ್ಯರು ''ಟೀಕಿಸಿದ್ದಾರೆ'' ಎನ್ನುವ ಪದವನ್ನು ಬಳಸುವುದು ಸರಿಯಾದುದಲ್ಲವೆಂದು ಹೇಳುತ್ತೇನೆ. ಇಂಥಾ ಪದಗಳನ್ನು ಬಳಸುವುದನ್ನು ಅವರು ನಿಲ್ಲಿಸಬೇಕು ; ಕಡಮೆ ಮಾಡಿದರೂ ಒಳ್ಳೆಯದೆ. ಅಗ್ರಲೇಖನದಲ್ಲಿರುವ ವಿಚಾರ ಸರಿಯೇ, ತಪ್ಪೇ ಎನ್ನುವುದರ ಮಟ್ಟಕ್ಕೆ ನಾವಿನ್ನೂ ಹೋಗಿಲ್ಲ. ನಾನೂ ಕೂಡ ಈ ಮನೆಯ ಸದಸ್ಯ. ತಾವೂ ತಮ್ಮ ಹಕ್ಕನ್ನು ಕಾಪಾಡಿಕೊಳ್ಳುವುದರಲ್ಲಿ ಎಷ್ಟು ಆಸಕ್ತಿ ವಹಿಸುತ್ತೀರೋ ನನಗೆ ಆಷ್ಟೇ ಇದೆ. ಆದುದರಿಂದ, ಮಾನ್ಯ ಸದಸ್ಯರು ಅಂಥಾ ಶಬ್ದಗಳನ್ನು ಬಳಸುವುದು ಸಮಂಜಸವಲ್ಲವೆಂದು ಹೇಳಬಯಸುತ್ತೇನೆ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಸದನದ ಗೌರವಕ್ಕೆ ಧಕ್ಕೆ ಬಂದಿದ್ದರೂ ಮಾನ್ಯ ಸಚಿವರು ಈ ರೀತಿ ಮಾತನಾಡುತ್ತಿರುವುದು ದುರ್ದೈವದ ಸಂಗತಿ.

SRI K. H. RANGANATH.—I am second to none in upholding the honour and dignity of the House. Let not my hon'ble Friend have a monopoly of that. ಒಂದು ಪತ್ರಿಕೆ ಅಗ್ರಲೇಖನ ಬರೆದಿರುವಾಗ ಅದು ಅಭಿಪ್ರಾಯವೆಂದು ನನ್ನ ಅಭಿಪ್ರಾಯ. ಆದರೆ, ಈ ಹಂತದಲ್ಲಿ ಅಂಥಾ ಶಬ್ದವನ್ನು ಬಳಸಬಾರದೆಂದು ಹೇಳುತ್ತಿದ್ದೇನೆ ಅಷ್ಟೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸಚಿವರು ಹೇಳಿದ ವಿಚಾರಗಳನ್ನು ನಾನು ಬಹಳ ಲಕ್ಷ್ಯಗೊಟ್ಟು ಕೇಳಿದ್ದೇನೆ. ಅವರು ಸಂಪಾದಕೀಯವರನ್ನು ಓದಿದ್ದಾರೋ ಇಲ್ಲವೋ ಗೊತ್ತಿಲ್ಲ.

ಶ್ರೀ ಕೆ. ಎಚ್. ರಂಗನಾಥ್.—ಓದಿದ್ದೇನೆ. ಮಾನ್ಯ ಸದಸ್ಯರು ಬಳಸುವ ಶಬ್ದ ಸರಿ ಇಲ್ಲ ಎಂದು ನಾನು ಹೇಳುತ್ತಿರುವುದು.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರು ಬಳಸಿದ ಶಬ್ದ ಪಾರ್ಲಿಮೆಂಟರಿ ಶಬ್ದವಲ್ಲ ವೆಂದು ಸಚಿವರು ಹೇಳುತ್ತಿದ್ದಾರೆ. ''ಟೀಕಿಸಿದ್ದಾರೆ'' ಎನ್ನುವುದಕ್ಕಿಂತ ಪಾರ್ಲಿಮೆಂಟರಿ ಪದ ಯಾವುದೆಂದು ನನಗೆ ಕಾಣಿಸುತ್ತಿಲ್ಲ.

SRI K. H. RANGANATH.—I never said that it is unparliamentary.

ಶ್ರೀ ಎಸ್. ಆರ್. ಬೊಮ್ಮಾಯಿ.—ನನಗೆ ಬಹಳ ವೇದನೆಯಾಗುತ್ತಿದೆ. ಟೀಕಿಸಿದ್ದಾರೆ ಎನ್ನುವ ಶಬ್ದ ಅನ್‌ಪಾರ್ಲಿಮೆಂಟರಿಯಲ್ಲ. ಮಾನ್ಯ ಸದಸ್ಯರು ''ಸಂಪಾದಕರು ಈ ಮನೆಯ ಕಾರ್ಯಕಲಾಪಗಳನ್ನು ಟೀಕಿಸಿದ್ದಾರೆ'' ಎಂದು ಪ್ರಾರಂಭ ಮಾಡಿದ್ದಾರೆ. ಅವರು ಅತ್ಯಂತ ಯೋಗ್ಯ ಶಬ್ದವನ್ನು ಬಳಸಿದ್ದಾರೆ. ಆ ಶಬ್ದಕ್ಕೆ ಆಕ್ಷೇಪಣೆಯನ್ನು ತೆಗೆದುಕೊಂಡು ಇವರು ವಿವರಣೆ ಕೊಡುತ್ತಿದ್ದಾರೆ. ಪತ್ರಿಕೆಯನ್ನು ಸಂರಕ್ಷಣೆ ಮಾಡುವುದಕ್ಕೆ ನಾವು ಪ್ರಯತ್ನ ಮಾಡಿದ್ದೇವೆ. ಪತ್ರಿಕೆಗಳಿಗೆ ಸಂರಕ್ಷಣೆ ಕೊಡುವುದು ನನ್ನ ಮತ್ತು ಅವರ ಪಕ್ಷದ ಪ್ರಶ್ನೆ ಅಲ್ಲ. ಈ ಮನೆಯ ಗೌರವದ ಪ್ರಶ್ನೆ ಬಂದಾಗ ಪತ್ರಿಕೆಗಳಿಗೆ ಸಂಪೂರ್ಣವಾದ ಸ್ವಾತಂತ್ರ್ಯ ಇರಬೇಕು ಎಂದು ನಾವು ಹೇಳಿದ್ದೇವೆ. ಅದು ಯಾವ ಕಾಲದಲ್ಲಿ ಪತ್ರಿಕೆಗಳಿಗೆ ಸ್ವಾತಂತ್ರ್ಯ ಇಲ್ಲದೆ ಈ ಮನೆಯ ಕಾರ್ಯಕಲಾಪಗಳನ್ನು ಎಷ್ಟು ಕೊಡಬೇಕೋ ಅಷ್ಟನ್ನು ಮಾತ್ರ ಕೊಡುತ್ತಿದ್ದರು. ಆದ್ದರಿಂದ ಪತ್ರಿಕೆಗಳಿಗೆ ಸ್ವಾತಂತ್ರ್ಯ ಇರಬೇಕೆಂದು ಬಾದ ಮಾಡಿ ಸ್ವಾತಂತ್ರ್ಯವನ್ನು ತಂದು ಕೊಟ್ಟಿದ್ದೇವೆ ಎಂದು ಹೇಳತಕ್ಕಂಥಾದ್ದು ಆಡಳಿತ ಪಕ್ಷದವರಿಗಿಂತ ನಮಗೆ ಒಂದು ಗುಂಜೆಯಾದರೂ ಹೆಚ್ಚಾಗಿದೆ ಎಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ಪತ್ರಿಕೆಗಳ ಬಗ್ಗೆ ನಮಗೂ ಅಭಿಮಾನ ಇದೆ. ಆದರೆ ಈಗ ಪತ್ರಿಕೆಗಳು ಕೂಡ ತಮ್ಮ ಸ್ವಾತಂತ್ರ್ಯವನ್ನು ಯಾವ ರೀತಿ ಉಪಯೋಗ ಮಾಡಿಕೊಳ್ಳಬೇಕು ಎನ್ನುವ ಬಗ್ಗೆ ಈಗ ಪ್ರಶ್ನೆ ಬಂದಿದೆ. ಆದರಲ್ಲಿಯೂ ಈ ಮನೆಯ ಕಾರ್ಯಕಲಾಪಗಳ ಬಗ್ಗೆ it is a reflection on the conduct of the proceeding of this House. ಆದ್ದರಿಂದ ಇದರ ಬಗ್ಗೆ ಪೂರ್ತಿ ಅಧ್ಯಯನ ಮಾಡಿ ನಿರ್ಣಯವನ್ನು ಕೊಡಬೇಕಾಗುತ್ತದೆ. ಇಲ್ಲದೇ ಹೋದರೆ ಇದು It reflects not only on the conduct of the proceedings but also on the conduct of the Speaker. Therefore we are now seeking consent of the Chair. We will explain after the permission is given.

ಶ್ರೀ ಕೆ. ಎಚ್. ರಂಗನಾಥ್.—ಮಾನ್ಯ ವಿರೋಧ ಪಕ್ಷದ ನಾಯಕರು ಇದನ್ನು ಕೋಪದಲ್ಲಿ ತೆಗೆದುಕೊಂಡಿದ್ದಾರೆ. ನಾನು ಹೇಳಿದ್ದು ಏನೆಂದರೆ ಅದು ಅನ್‌ಪಾರ್ಲಿಮೆಂಟರಿ ಎಂದು ನಾನು ಹೇಳಿಲ್ಲ. ಅದು ಅನ್‌ಪಾರ್ಲಿಮೆಂಟರಿ ಅದರ ಬಗ್ಗೆ ರೂಲಿಂಗ್ ಕೊಡಬೇಕು ಎಂದು ನಾನು ಹೇಳಿಲ್ಲ. ನಾನು ಹೇಳಿದ್ದು ಏನೆಂದರೆ ಟೀಕೆ ಮಾಡುವುದಕ್ಕೆ ಈ ಹೌಸ್‌ನಲ್ಲಿ ಈ ಪದವನ್ನು ಬಳಸುವುದು ಸರಿಯಲ್ಲ. ಅಂಥಾ ಪದವನ್ನು ಬಳಸದೇ ಇರುವುದು ಒಳ್ಳೆಯದು ಎಂದು ನಾನು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ ಎಂದು ಹೇಳಿದ್ದೇನೆ. ಇದಕ್ಕೆ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಏತಕ್ಕೆ ಕೋಪ ಬಂತು ?

ಶ್ರೀ ಎಸ್. ಆರ್ ಬೊಮ್ಮಾಯಿ.—ಹಾಗಾದರೆ ಯಾವ ಶಬ್ದವನ್ನು ಉಪಯೋಗ ಮಾಡಬೇಕು ಎಂಬುದನ್ನು ಹೇಳಿ.

SRI K. H. RANGANATH.—Let not my friend creat an impression that I have raised an objection. We are at the stage of rule 177. A notice is given and the hon'ble member is seeking the chair's consent to raise the issue. Then subsequent things will come.

ಅಧ್ಯಕ್ಷರು.—ರೂಲ್ ೧೭೭ ರಲ್ಲಿ ಈ ರೀತಿ ಇದೆ.—

"A member may, with the consent of the Speaker, raise a question involving a breach of previlege either of a member or of the Assembly or of a Committee there of" ಎಂದು ಇದೆ. ಇದನ್ನು ಅಡ್ಮಿಟ್ ಮಾಡಿದಾಗ ವಿವರವಾಗಿ ಹೇಳಬಹುದು. ಈ ಹಂತದಲ್ಲಿ ವಿವರವಾಗಿ ಹೇಳುವುದಕ್ಕೆ ಬರುವುದಿಲ್ಲ. ಆದ್ದರಿಂದ ಸ್ವಲ್ಪ ಸಂಕ್ಷೇಪವಾಗಿ ಹೇಳಿ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಈಗ ನಾನು ವಿವರವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಪ್ರತಿಪಾದನೆ ಮಾಡತಕ್ಕದು ಮುಂದಿನ ಹಂತ. ರೂಲ್ ನಂಬರ್ ೧೭೭ ಮತ್ತು ೧೭೮ ನ್ನು ಓದಿ ತಿಳಿದು ಕೊಂಡು ನೋಟೀಸ್ ಬರೆದುಕೊಟ್ಟಮೇಲೆ ನಾನು ಇದನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ನಾನು ಅದನ್ನು ಪ್ರತಿಪಾದನೆ ಮಾಡುತ್ತಿಲ್ಲ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಸ್ವಾಮಿ ನಾನು ಒಂದು ಕ್ರಿಯಾಲೋಪವನ್ನು ಎತ್ತುತ್ತೇನೆ. ಈಗ ಮಾನ್ಯ ಸದಸ್ಯರು ಒಂದು ಪ್ರಿವಿಲೇಜ್ ನೋಟೀಸ್ ಕೊಟ್ಟಿದ್ದಾರೆ. ಅದು ಅಡ್ಮಿಟ್ ಆಗುವುದಕ್ಕಿಂತ ಮುಂಚೆ ಆ ಸದಸ್ಯರಾಗಲೀ ಅಥವಾ ಅವರ ಕಡೆಯವರಾಗಲಿ ಆ ವಿಷಯದ ಮೇಲೆ ವಾದ ಮಾಡುವುದಕ್ಕೆ ಅವಕಾಶ ಇದೆಯೇ ? ಅದನ್ನು ಅಡ್ಮಿಟ್ ಮಾಡುವುದು ಬಿಡುವುದು ತಮ್ಮ ಡಿಸ್‌ಕ್ರಿಷನ್ ಮೇಲೆ ಹೋಗುತ್ತದೆ. ಈಗ ತಾವು ಅದನ್ನು ಅಡ್ಮಿಟ್ ಮಾಡುವುದಕ್ಕೆ ಮುಂಚೆ ಅದರ ಮೇಲೆ ಅವರು ವಾದ ಮಾಡುವುದಕ್ಕೆ ಅವಕಾಶ ಇದೆಯೇ ? ಎಡಿಟೋರಿಯಲ್ ಮೇಲೆ ಅವರು ಹೇಳುವುದಕ್ಕೆ ತಾವು ಅನುಮತಿ ಕೊಡುವುದಾದರೆ I have an argument that he has the right to write such an article. ಈಗ ಅವರಿಗೆ ವಾದ ಮಾಡುವುದಕೆ. ಅಧಿಕಾರ ಬರುತ್ತದೆ ಎಂದರೆ ನನಗೂ ಪ್ರತಿ ವಾದ ಹೇಳುವುದಕ್ಕೆ ಅಧಿಕಾರ ಬರುತ್ತದೆ.

ಅಧ್ಯಕ್ಷರು.—ನಾನು ಅವರಿಗೆ ಈ ವಿಷಯದ ಮೇಲೆ ವಾದ ಮಾಡುವುದಕ್ಕೆ ಅವಕಾಶ ಕೊಟ್ಟಿಲ್ಲ ವೆಂಬುದು ಈ ಮಾನ್ಯ ಸಭೆಗೆ ಗೊತ್ತಿಲ್ಲವೇ ? ಸುಮ್ಮನೆ ಅನಾವಶ್ಯಕವಾಗಿ ಈ ಸಭೆಯ ಕಾಲವನ್ನು ಕಳೆಯಬಾರದು.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ತಾವು ಅನುಮತಿ ಕೊಡದೆ ಇವರಿಗೆ ಇಷ್ಟೊಂದು ಭಾಷಣ ಮಾಡುವುದಕ್ಕೆ ಹೇಗೆ ಅಧಿಕಾರ ಬಂತು ?

ಶ್ರೀ ಎಸ್ ಆರ್. ಬೊಪ್ಪಾಯಿ.—ಮಾನ್ಯ ಸದಸ್ಯರು ಸ್ವಲ್ಪ ರೂಲ್ಸ್ ಚೆನ್ನಾಗಿ ಓದಿಕೊಂಡು ಬಂದರೆ ಸರಿಯಾಗಿರುತ್ತದೆ.

If necessary, I will refer to the Ruling also. There are Rulings of Lok Sabha.

ಅಧ್ಯಕ್ಷರು.—ಇಂಥ ವಿಷಯಂಗಳು ಅನೇಕಸಾರಿ ಇದೇ ಸದನದಲ್ಲಿ ಬಂದು ಪ್ರಸ್ತಾಪವಾಗಿದೆ. Before consent is given by the Speaker, the hon,ble member who gives? notice could have only a preliminary say. ಹಾಗಿರುವಾಗ ವಿವರವಾದ ಹೇಳಿಕೆಯನ್ನು ನಾನು ಒಪ್ಪುವುದಿಲ್ಲ. ಮೊದಲು ಎಡಿಟರ್‌ರವರಿಗೆ ಅವಕಾಶ ಕೊಡಬೇಕು ಅನಂತರ ವಿಷಯವನ್ನು ಚರ್ಚೆ ಮಾಡಬೇಕೆಂದು ಹೇಳಿದ್ದನ್ನು ನಾನು ಕೇಳಿದ್ದೇನೆ. ಆದ್ದರಿಂದ Hon'ble member Sri Wadeyaraj will have a preliminary submission in the matter.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಪ್ರಿವಿಲೇಜ್ ನೋಟೀಸ್‌ಗೆ ವಿರುದ್ಧವಾಗಿ ಉತ್ತರ ಕೊಡುವುದಕ್ಕೆ ತಾವು ಅನುಮತಿ ಕೊಟ್ಟಿದ್ದೀರಿ.....

Mr. SPEAKER.—I am extremely sorry; the hon'ble member has not heard me properly. He cannot mislead me.

SRI S. M. SHEERNALY CHANDRASHEKHAR.—He is pleading his case...

SRI K. H. RANGANATH.—We are not even at that stage. The hon'ble member has given a Notice and the Chair has asked him to have a preliminary say. My submission was, when he was doing that ಟೀಕಿಸಿದ್ದಾರೆ ಎಂದು ಹೇಳಿದ್ದರಿಂದ ಆದು ಜೇಡ ಎಂದು ಹೇಳಿದೆ ಅಷ್ಟೆ. Beyond that I did not say anything.

ಅಧ್ಯಕ್ಷರು.—ಮೊದಲು ಸೂಕ್ಷ್ಮವಾಗಿ ಹೇಳಿ ಆಮೇಲೆ ರಿಮಾರ್ಕ್ಸ್ ಬಗ್ಗೆ ಮಾತನಾಡೋಣ ಎಂದು ನಾನು ಬೇಳಿದ್ದು.

ಶ್ರೀ ಗೋವಿಂದ ಪಿ. ಒಡೆಯರಾಜ್.—ಸ್ವಾಮಿ, ರೂಲಿಂಗ್ ಕೊಟ್ಟು ಆಗಿದೆ. ಆದರೂ ಅವರು ಮಾತನಾಡುವುದಕ್ಕೆ ಏತಕ್ಕೆ ಅವಕಾಶ ಮಾಡಿಕೊಡುತ್ತಿದ್ದೀರಿ ? ನಾನು ಪ್ರಿಲಿಮಿನರಿಯಾಗಿ ಹೇಳುತ್ತಿದ್ದೇನೆಯೇ ಹೊರತು ಸ್ಟೇಟ್‌ಮೆಂಟ್ ಮಾಡುತ್ತಿಲ್ಲ. ಈ ರೀತಿ ಸುಮ್ಮನೆ ಮಾತನಾಡುವುದು ಸರಿಯಲ್ಲ.

(ಮಾನ್ಯ ಸದಸ್ಯರು ಪುಸ್ತಕವನ್ನು ಮೇಜಿನ ಮೇಲೆ ಎಸೆದರು)

SRI K. H. RANGANATH.—Why is the hon'ble member getting upset ? It is a reflection on the House.

SRI GOVIND P. WADEYARAJ.—When a Ruling has already been given, why are members behaving like this :

SRI K. H. RANGANATH.—We have to be patent here.

Mr. SPEAKER.—Hon'ble member Sri Wadeyaraj should not throw the book on the table like that.

ಶ್ರೀ ಗೋವಿಂದ ಪಿ. ಒಡೆಯರಾಜ್.—ಮಾನ್ಯ ಸದಸ್ಯರು ನನಗೆ ಆಡಚಣೆ ಮಾಡುತ್ತಿದ್ದಾರೆ, ನನಗೆ ಮಾತನಾಡುವುದಕ್ಕೆ ತಾವು ಅವಕಾಶ ಕೊಟ್ಟಿದ್ದೀರಿ. ಮತ್ತೆ ಮತ್ತೆ ನನಗೆ ಆಡಚಣೆ ಮಾಡುವುದಾದರೆ ನನಗೆ ಬಹಳ ದುಃಖವಾಗುತ್ತದೆ.

Mr. SPEAKER.—If members obstruct, I am here to safeguard the hon'ble member.

ಶ್ರೀ ಗೋವಿಂದ ಪಿ. ಒಡೆಯರಾಜ್.—The hon'ble Minister has been doing it. ಮಾನ್ಯ ಸಭಾಧ್ಯಕ್ಷರೆ, ಈ ವಿಷಯ ಇಡೀ ಸದನಕ್ಕೇ ಸಂಬಂಧಪಟ್ಟದ್ದು. ನಿಜವಾಗಿ ಹೇಳುವುದಾದರೆ ಸಂಪಾದಕೀಯದಲ್ಲಿ ಏನೊಂದು ಅಗೌರವವಾದ ಮಾತುಗಳು ಒಂದಿವೆ ಇದು ಪ್ರತಿಯೊಬ್ಬ ಸದಸ್ಯರ ಮನಸ್ಸನ್ನೂ ಚುಚ್ಚುವಂತಹ ಮಾತು. ಆದರೆ ಮಾನ್ಯ ಸದಸ್ಯರು ಏತಕ್ಕೆ ಹೀಗೆ ಮಾತನಾಡುತ್ತಿದ್ದಾರೋ ನನಗಂತೂ ಗೊತ್ತಿಲ್ಲ.

SRI K. H. RANGANATH.—Sir, I have not confused anything. I do not think the hon'ble member understands Kannada. I only made a request to the Chair that let the hon'ble member not come to the conclusion "ಅಗ್ರಲೇಖನದಿಂದ ಈ ಸದನದ ನಡವಳಿಕೆಗಳನ್ನು ಟೀಕಿಸಿವೆ" ಎಂದು ಇದೆ; ಇದನ್ನು ಬಳಸುವಾರದೆಂದು ನಾನು ತಮ್ಮನ್ನು ಕೇಳಿಕೊಂಡೆ. ಇದರಲ್ಲಿ ಏನು ತಪ್ಪಿದೆ. ? Have I a confused his views ? Have I confused this House ?

ಶ್ರೀ ಗೋವಿಂದ ಪಿ. ಒಡೆಯರಾಜ್.—ವಿಷಯ ಬಹಳ ಗಂಭೀರವಾದುದು.....

ಅಧ್ಯಕ್ಷರು.—ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯವನ್ನು ಸೂಕ್ಷ್ಮವಾಗಿ ತಿಳಿಸಬೇಕು.

ಶ್ರೀ ಗೋವಿಂದ ಪಿ. ಒಡೆಯರಾಜ್.—ಈ ಅಗ್ರಲೇಖನದಲ್ಲಿ ಬಳಸಿರತಕ್ಕಂಥ ಪ್ರತಿಯೊಂದು ಶಬ್ದವೂ ಕೂಡ ಈ ಮಾನ್ಯ ಈ ಸಭೆಯಲ್ಲಿ ನಡೆಯತಕ್ಕ ಕಾರ್ಯಕಲಾಪಗಳಿಗೆ ಅಗೌರವವನ್ನು ತರತಕ್ಕವು ಗಳಾಗಿವೆ. ಈ ಸದನದ ಘನತೆ ಗೌರವಗಳಿಗೆ ಬಹಳಷ್ಟು ಚ್ಯುತಿ ಬಂದಿದೆ, ಬ್ರೀಚ್ ಆಫ್ ಪ್ರಿವಿಲೇಜ್ ಆಗಿದೆ ಎಂದು ನಾನು ತಮ್ಮಲ್ಲಿ ನಿವೇದಿಸಿಕೊಂಡಿದ್ದೇನೆ. ಈ ವಿಷಯ ಈ ಕಡೆಯ ಮತ್ತು ಆ ಕಡೆಯ ಎಲ್ಲ ಮಾನ್ಯ ಸದಸ್ಯರಿಗೂ ಸಂಬಂಧಪಟ್ಟದ್ದು. ಇಂಥ ಸಂದರ್ಭದಲ್ಲಿ ನಾವು ಯಾವುದೇ ಒಂದು ಪಕ್ಷವನ್ನು ವಹಿಸಿಕೊಂಡು ಮಾತನಾಡುವುದು ಸರಿಯಲ್ಲ. ಒಂದು ಪಕ್ಷ ಯಾರಾದರೂ ಈ ಸಂದರ್ಭದಲ್ಲಿ ಪಕ್ಷವನ್ನು ವಹಿಸಿಕೊಂಡು ಮಾತನಾಡಿದರೆ ಬಹುಶಃ ಅವರೇ ಅದನ್ನು ಬೇಕಾಗಿಯೇ ಬರೆಸಿಕೊಂಡು ಬಂದಿರಬೇಕೆಂಬುದಾಗಿ ಅನುಮಾನ ಬರುತ್ತದೆ. ವಿಷಯವನ್ನು ಸರಿಯಾಗಿ ಅರ್ಥಮಾಡಿಕೊಳ್ಳದೇ ಇರುವುದರಿಂದ ಹೀಗಾಗಿದೆ ಎಂದು ನನಗನಿಸುತ್ತದೆ.

ಕೊನೆಯದಾಗಿ ಒಂದು ಮಾತು ಹೇಳುವುದಾದರೆ, ಇದು ವಿಧಾನ ಮಂಡಲಕ್ಕೆ ವಿರುದ್ಧವಾಗಿ ಬರೆದುದಾಗಿದೆ.

ಯಾವ ವಿಧಾನಮಂಡಲ ಹಣವನ್ನು ಮಂಜೂರು ಮಾಡುತ್ತದೋ ಅಂಥ ವಿಧಾನಮಂಡಲದ ಗೌರವಕ್ಕೆ ಧಕ್ಕೆ ತರತಕ್ಕ ರೀತಿಯಲ್ಲಿ ಈ ರೀತಿಯಾದ ಲೇಖನವನ್ನು ಪತ್ರಿಕೆಯಲ್ಲಿ ಬರೆದರೆ ಈ ಸಭೆಯ ಹಕ್ಕುಭಾದ್ಯತೆಗಳ ಉಲ್ಲಂಘನೆ ಮಾತ್ರವಲ್ಲ ಈ ಸಭೆಯನ್ನು ಬಹಳಷ್ಟು ಕಡೆಗಣಿಸಿ ಹೇಳಿದಂತಾಗುತ್ತದೆ. ಆದಕ್ಕಾಗಿ ಈ ಅಗ್ರಲೇಖನದಿಂದ ಇಡೀ ಕರ್ನಾಟಕ ವಿಧಾನಮಂಡಲದ ಗೌರವಕ್ಕೆ ಚ್ಯುತಿ ಬಂದಿದೆ, ದೊಡ್ಡ ಧಕ್ಕೆ ಬಂದಿದೆ ಮತ್ತು ಹಕ್ಕುಬಾಧ್ಯತೆಗಳ ಉಲ್ಲಂಘನೆಯಾಗಿದೆ. ಆದಕ್ಕಾಗಿ ಈ ವಿಷಯವನ್ನು ಚರ್ಚೆ ಮಾಡಲಿಕ್ಕೆ ಮಾನ್ಯ ಅಧ್ಯಕ್ಷರು ಅಸ್ಪದ ಕೊಡಬೇಕು; ಮತ್ತು ಈ ಪ್ರಕರಣವನ್ನು ಹಕ್ಕುಬಾಧ್ಯತಾ ಸಮಿತಿಗೆ ರೆಫರ್ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು ಎಂದು ತಮ್ಮಲ್ಲಿ ಗೌರವಯುತವಾಗಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇದು ಎಲ್ಲರಿಗೂ ಸಂಬಂಧಪಟ್ಟ ವಿಷಯ.

೩-೦೦ ಪಿ.ಎಂ.

† SRI S.R. BOMMAI (Hubli).—I would like to speak as I have signed the notice. Before I comment, I would like to bring to the notice of the Chair and the hon'ble members the views of the legislatures and the Lok Sabha on the reflections on the procedure and conduct of the proceedings of the House and about the members. I would like to read two sentences from Mays Parliamentary Practice Page 144.

> "The House of Commons resolved that to bring or publish any reflection of the House is the high violation of the rights and privileges of the House and indignity offered to the House by words spoken or writing published reflecting on the character and proceedings have been constantly punished by both the Lords and the Commons, that such acts tend to in the performance of their function by diminishing the respect due to them."

I would just refer reflection upon members, a particular individual not being named or otherwise indicated or equivalent to reflection. There are a number of case laws, citations are there, but I am not going to refer to them.

I am now reading from Parliamentary Procedure by Kaul and Shakdhar-page 241. Which amounts to breach of privilege, instances have been given and there is a lot of discussion. I will not refer to the discussion. "On the reflection on the character and impartiality of the Speaker in the discharge of his duties, reflction on the members in the execution of their duties and refelection on the Chair." If we read carefully the editorial is a direct reflection on the conduct of members in this House. By so doing, there is a reflection on the Chair itself. "That the Chair is permitting to conduct the proceedings in the House in a particular manner which is against the interests of the public." I am not going into the editorial, if it read as a whole, it is a reflection on the Chair itself. "How the Chair is permitting the proceedings which are not in interests of the public and the money of the public is wasted." That is what is written in the editorial. At the moment I am not going into the details. In the persent context, unless a notice is issued to the Editor and an opportunity is given to the Editor and after hearing him if the Editor merds himself, then this House takes a decision to condone him or pardon him. If the Editor insists that what he has written is correct, then what action is to be taken is left to the Chair and the House. The Chair has assured that after hearing from the Editor, this matter will be again discussed in this House. Therefore I am not going to make any comments at present. Even for admissibility, we have to say something.

Since ths Chair has assured that another opportunity will be given to us, I would conclude. Let the matter be brought up tomorrow or the day after.

MR. SPEAKER.—I have clearly stated that this matter will be brought before the House after getting the remarks of the Editor in question.

ಶ್ರೀ ಎಚ್.ಡಿ. ದೇವೇಗೌಡ.—ತಾವು ರೂಲಿಂಗ್ ಕೊಡುತ್ತೀರಿ ಎಂದು ಕಾಣುತ್ತದೆ. ತಾವು ಪತ್ರಿಕಾ ಸಂಪಾದಕರ ರಿಮಾರ್ಕ್ಸ್ ತರಿಸಿ ಆಮೇಲೆ ನಿರ್ಣಯ ಮಾಡುತ್ತೇನೆ ಎಂದು ಹೇಳಿದ್ದೀರಿ. ತಾವು ಈ ಪತ್ರಿಕಾ ಸಂಪಾದಕರಿಗೆ ಪತ್ರ ಬರೆಯುತ್ತೀರಿ, ಇದರ ಬಗ್ಗೆ ವಿವರಣೆ ಕೇಳುತ್ತೀರಿ, ಆದಾದಮೇಲೆ ನಿರ್ಣಯ ಮಾಡುತ್ತೀರಿ ಎಂದು ಭಾವಿಸುತ್ತೇನೆ.

MR. SPEAKER.—I will bring this matter again before this House.

ಶ್ರೀ ಎಚ್.ಡಿ. ದೇವೇಗೌಡ.—ಈ ಪತ್ರಿಕೆಯ ಸಂಪಾದಕರು ಏನಿದೆ ಅದರ ಬಗ್ಗೆ ತಾವೂ ಕೂಡ ಅವರು ಈ ಸಭೆಯ ಗೌರವಕ್ಕೆ ಕುಂದು ಉಂಟುಮಾಡತಕ್ಕ ಅಗ್ರ ಲೇಖನವನ್ನು ಬರೆದಿದ್ದಾರೆಂದು ಭಾವಿಸುವುದಾದರೆ ತಾವು ಪತ್ರಿಕೆಯನ್ನೇ ಕೇಳಬಹುದು. May I know whether you have come to any conclusion on this issue? If you have come to the conclusion that there is no derogatory remarks, then there is no question of calling for his remarks.

MR. SPEAKER.—I have not come to any conclusion.

SRI H.D. DEVE GOWDA.-If you find that there is some prima facie case I can understand that you have got every right to call for his remarks. Whether you have come to that conclusion ?

MR. SPEAKER.—That is not the point. I said that an opportunity is to be given to the Editor. I will first of all call for his remarks and then deal with the matter according to rules.

ಶ್ರೀ ಎಚ್.ಡಿ. ದೇವೇಗೌಡ.—ಮಾನ್ಯ ಸಂಸದೀಯ ಸಚಿವರಿಗೂ ಈ ಸಭೆಯ ಕಾರ್ಯಕಲಾಪದ ಅನುಭವ ಸಾಕಷ್ಟಿದೆ. ನಾವು ಹಿಂದೆ ಉದಯವಾಣಿ ಪತ್ರಿಕೆಯ ಮೇಲೆ ಹಕ್ಕುಬಾಧ್ಯತಾ ನಿರ್ಣಯವನ್ನು ಕಳಿಸಿ ಈ ಸಭೆ ತೀರ್ಮಾನ ತೆಗೆದುಕೊಂಡಿದ್ದ ವಿಷಯ ತಮಗೆ ಗೊತ್ತಿದೆ. ಈ ಸಭೆಯು ಒಂದು ತೀರ್ಮಾನಕ್ಕೆ ಬಂದು ಹಕ್ಕುಬಾಧ್ಯತಾ ಸಮಿತಿಗೆ ಅದನ್ನು ಕಳಿಸಿದಮೇಲೆ ಅವರು ಸಂಬಂಧಪಟ್ಟಂಥ ಪತ್ರಿಕೆಯ ಸಂಪಾದಕರನ್ನು ಮತ್ತು ಯಾರು ಅದರಲ್ಲಿ ಂಥ ಒಂದು ಲೇಖನವನ್ನು ಬರೆದಿದ್ದರೋ ಅವರನ್ನೂ ಕರೆಸಿ ವಿಚಾರಣೆ ಮಾಡತಕ್ಕ ಸಂಪ್ರದಾಯವನ್ನು ಈ ಸಭೆಯಲ್ಲಿ ನಾವು ನಡೆಸಿದ್ದೇವೆ. ಆ ಕನ್‌ವೆನ್‌ಷನ್ ಇದೆ. ಹಿಂದೆ ನಿರ್ಣಯ ತೆಗೆದುಕೊಂಡಿರತಕ್ಕ ಉದಾಹರಣೆಗಳು ನಮ್ಮ ಮುಂದಿವೆ. ಆದ್ದರಿಂದ ಈ ಸಂದರ್ಭದಲ್ಲಿ ತಾವು ಪತ್ರಿಕಾ ಸಂಪಾದಕರ ಪ್ರತಿಕ್ರಿಯೆಯನ್ನು ಕೇಳತಕ್ಕದ್ದು ಬಹುಶಃ ಸರಿಯಾದ ಕ್ರಮ ಅಲ್ಲವೇನೋ ಎಂದು ನನಗನ್ನಿಸುತ್ತದೆ. Please get it examined. You have got every right to give a ruling. You can rule out that there is no derogatory remark. If there is a prima facie case, then the question of calling for remarks does not arise. I do not know how the Parliamentary Minister is going to suggest to the Hon'ble Speaker for his final decision. ದಯವಾಡಿ ತಮ್ಮ ನಿಲುವು ಏನು ಎಂಬುದನ್ನು ತಿಳಿಸಬೇಕು.

SRI K.H. RANGANATH.—I agree with what the hon'ble member Sri Deve Gowda has submitted to the Chair. Sir, we are at the stage of 1977. A notice is given, I quite agree with the hon'ble member's suggestions. After going through the editorial that there is some breach of privilege, then we can take a decision. We are at the stage of 177 only. The hon'ble member has given notice enclosing the editorial.

Sir, I would request the Speaker to go through the contents of the notice and if you give consent the Hon'ble Members will make statements. Rule 177 deals with the question of privilege. Rule 178 determins whether it satisfies other conditions. Before you give consent you have to satisfy yourself whether the conditions as laid down in Rule 178 one adhered to. Then consent could be given according to Rule 180. Now you are at the stage of Rule 177. Hon'ble Member have got the privilage of giving notice and that is before you. And after going through the editorial and if you satisfy as pointed out by Mr. Deve Gowda, and the Rule 178 is satisfied and if you give consent as per Rule 180 then other things would also come. Therefore, I request you to take your own time. I personally feel that this is a matter which is very delicate. Everyone of us are zealous as the other Members are, so far as the rights and privileges of this House are

concerned. While taking a decision we must also consider the role that is going to be played by the press in a democracy. Therefore, my submission is since the notice is given you take your own time and go through the editorial and then take a decision. I quite agree with the submission made by Hon'ble Member Sri Deve Gowda. We have not yet reached that stage.

ಶ್ರೀ ಹೆಚ್ ಡಿ. ದೇವೇಗೌಡ.—ತಾವು ರೂಲಿಂಗ್ ಕೊಡುವುದಕ್ಕಿಂತ ಮುಂಚೆ, ಹಿಂದೆ ಈ ಸಭೆಯಲ್ಲಿ ಏನು ಕೆಲವು ತೀರ್ಮಾನಗಳು ಆಗಿವೆ ಅವುಗಳನ್ನೆಲ್ಲ ಪರಿಶೀಲಿಸಿ ನಾಳೆ ತಾವು ರೂಲಿಂಗ್ ಕೊಡಿ. ಆದರೆ ನಾನು ಈ ಸಂದರ್ಭದಲ್ಲಿ ಒಂದು ವಿಷಯಕ್ಕೆ ಮಹತ್ವ ಕೊಡುತ್ತೇನೆ. ಪ್ರತಿಯೊಬ್ಬರಿಗೂ ತಮ್ಮ ತಮ್ಮ ಅಭಿಪ್ರಾಯಗಳನ್ನು ಕೊಡುವುದಕ್ಕೆ ಸರ್ವ ಸ್ವತಂತ್ರ ಇದೆ. ಆದರೆ ಪದಪ್ರಯೋಗವನ್ನು ಮಾತ್ರ ನಾನು ಒತ್ತಿ ಹೇಳುತ್ತೇನೆ. ಅದು ಇವತ್ತು ಸಭೆಯ ಘನತೆಯನ್ನು ಮಿತಿಮೀರಿ ಹೋಗಿದೆ. ಸಭೆಯ ಘನತೆಗೆ ಧಕ್ಕೆ ತರುವಂತಹ ಸಮಯದಲ್ಲಿ ತಾವು ಸ್ವಲ್ಪ ಆದರ ಕಡೆಗೆ ಗಮನ ಕೊಡಬೇಕು. ಇವೆಲ್ಲ ಯಾರಿಗಾದರೂ ಕೂಡ ಮರ್ಯಾದೆಯನ್ನು ತರುವ ಅಂಶಗಳಲ್ಲ. ನಾನು ಬಾಕಿಯದಕ್ಕೆ ಹೆಚ್ಚು ವಿವರ ಕೊಡುವುದಿಲ್ಲ. ತಾವೆ ಆ ಬಗ್ಗೆ ತೀವ್ರವಾಗಿ ಯೋಚಿಸಬೇಕು. ಪ್ರತಿಯೊಬ್ಬ ಸದಸ್ಯರೂ ಯಾವ ರೀತಿ ವರ್ತಿಸುತ್ತಿದ್ದಾರೆ. ಸದನದ ಕೆಲಸ ಹೇಗೆ ನಡೆಯುತ್ತಿದೆ ಎಂಬುದನ್ನು ತಿಳಿಯುವುದಕ್ಕೆ ಪ್ರತಿಯೊಬ್ಬ ನಾಗರಿಕನಿಗೂ ಪತ್ರಿಕೆಯವರಿಗಂತ ಅಧಿಕಾರ ಇದೆ. ಆದರೆ ಇವತ್ತು ಯಾರಿಗೂ ಗೌರವ, ಮರ್ಯಾದೆ ತರುವ ಸಾಕ್ಷ್ಯ ಇಲ್ಲ ಎಂಬ ಪದದ ಪ್ರಯೋಗ ಏನಾಗುತ್ತದೆಂಬುದನ್ನು ನೋಡಬೇಕು ಅದು ಈ ಸಭೆಗೆ ಮತ್ತು ಈ ಸಭೆಯ ಅಧ್ಯಕ್ಷರಿಗೆ ರಿಫ್ಲೆಕ್ಟ್ ಆಗುತ್ತದೆ.

ಶ್ರೀ ಕೆ. ಹೆಚ್. ರಂಗನಾಥ್,—ತಾವು ಬಹಳ ಮುಂದೆ ಹೋಗಿದ್ದೀರಿ.

ಶ್ರೀ ಹೆಚ್. ಡಿ. ದೇವೇಗೌಡ.— ಇಲ್ಲ. ಇಲ್ಲ. ದಯವಿಟ್ಟು ಪರಿಶೀಲಿಸಿ ನೋಡಿ. ಈ ಬಗ್ಗೆ ಅಂತಿಮ ತೀರ್ಮಾನ ತೆಗೆದುಕೊಳ್ಳುವ ಅಧಿಕಾರ ಮಾನ್ಯ ಅಧ್ಯಕ್ಷರವರಿಗೆ ಬಿಟ್ಟಿದ್ದು. ಆದರೆ ಅವರು ಈ ಒಂದು ಅಂಶವನ್ನು ತಮ್ಮ ಗಮನದಲ್ಲಿಟ್ಟುಕೊಂಡು ತೀರ್ಪು ಕೊಡಬೇಕು; ಮತ್ತು ಈ ಒಂದು ಅಂಶಕ್ಕೆ ಬಹಳ ಮಹತ್ವ ಕೊಡಬೇಕೆಂದು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ಈ ಭಾಷೆಯ ಪ್ರಯೋಗ ಇನ್ನೆಂದೂ ಇದು ಸಭೆಯ ಘನತೆಗೆ ಧಕ್ಕೆ ತರುತ್ತದೆಯೋ ಇಲ್ಲವೆ ಹಕ್ಕು ಬಾಧ್ಯತೆಗೆ ಧಕ್ಕೆ ತರುತ್ತದೆಯೆ ಇಲ್ಲವೆ ಎಂಬುದನ್ನು ತಾವು ಕೂಲಂಕುಶವಾಗಿ ಪರಿಶೀಲಿಸಿ ತಮಗೆ ಧಕ್ಕೆ ತರುತ್ತದೆಂಬುದು ತಮ್ಮ ಮನಸ್ಸಿಗೆ ಅನ್ನಿಸಿದರೆ ತಾವು ಆ ಬಗ್ಗೆ ನಾಳೆ ರೂಲಿಂಗ್ ಕೊಡುವುದು ಬಿಡುವುದು ತಮಗೆ ಬಿಟ್ಟಿದ್ದು.

ಶ್ರೀ ಕೆ. ಹೆಚ್. ರಂಗನಾಥ್.—ತಾವು ಆ ಪದದ ಬಗ್ಗೆ ಒತ್ತಿ ಒತ್ತಿ ಹೇಳುತ್ತೀರಿ. ಅದು ವಾದ ಗ್ರಸ್ಥವಾದ ವಿಚಾರ. ತಾವಂತೂ ಬಹಳ ಬುದ್ಧಿವಂತಿಕೆಯಿಂದ ತಮ್ಮ ವಾದವನ್ನು ಮುಗಿಸಿಬಿಟ್ಟಿರಿ. ನಾವು ನೋಟೀಸ್ ಕೊಟ್ಟಿದ್ದೇವೆ, ತಾವು ಅದನ್ನು ಓದಬೇಕು, ನಂತರ ತಮಗೆ ಏನು ಅನ್ನಿಸುತ್ತದೆ ಅದರ ಮೇಲೆ ನಿರ್ಣಯ ಕೊಡಿ ಎಂದು ಹೇಳಿ ಪುನಃ ಮತ್ತೊಂದು ಮಾತನ್ನು ಹೇಳಿ ಅದನ್ನು ತಾವು ಗಮನದಲ್ಲಿಟ್ಟುಕೊಂಡು ರೂಲಿಂಗ್ ಕೊಡಿ ಎಂದು ಹೇಳುವುದು ಬಹಳ ಚೆನ್ನಾಗಿದೆ !

(ಮಾನ್ಯ ದೇವೇಗೌಡರು ಮಾತನಾಡಲು ಎದ್ದುನಿಂತರು)

ಅಧ್ಯಕ್ಷರು.—ಇನ್ನು ಮಾನ್ಯ ಸದಸ್ಯರು ಆ ಬಗ್ಗೆ ಚರ್ಚೆ ಮಾಡುವುದು ಬೇಡ; ವಿಮರ್ಶೆ ಮಾಡುವುದು ಬೇಡ.

SRI H. D. DEVE GOWDA.—I am only bring to your notice that before you take any decision please go through all the aspects and then give a ruling.

SRI S. R. BOMMAI.—Perhaps the Hon'ble Parliamentary Affairs Minister and my colleagues have said that there is no necessity of giving notice to the Press. I differ here. We have not yet arrived at

that stage. I would also refer to the proceedings of the House and Parliament. When such a privilege motion is raised against any publication in the Press, normally the practice is that a notice has to be issued to the editor of the Press. After the reply is received again the matter is brought before the House and the Member who has given notice has the right to make Statement after looking into the reply of the editor. After the reply again we have the right to make statement. After the receipt of the reply the Member may be permitted again to raise this matter and make statement,

MR. SPEAKER.—Mr. Vodeyaraj has given notice under Rules 177 and 178 of the Rules of Procedure and Conduct of Business on the Editorial publications in 'Samyuktha Karnataka'. He has made a Preliminary submission in the matter. I will read from "PARLIAMENTARY PRACTICE & PROCEDURE" by Mr. M. N. Kaul and Mr, Shakdar.

> If a newspaper reports incorrectly the proceedings of the House casting reflection on the House or its Members, the Speaker may. in the first instance, give an opportunity to the Editor of the newspapers to present his case before giving his consent to the raising of the question of privilege in the House".

Therefore, I am sending a copy of this notice for his comments. After receipt of the same, I will place this matter before the House and if necessary I will allow both the Treasury Benches and the Opposition Benches to have a say in the matter and then I will give my ruling whether to give consent or not. Therefore, the matter is ended at this stage.

I had promised that I would give a ruling on the language matter,

Ruling by the Chair

re : Question of language to be issued in the House

MR. SPEAKER.—On 1st July 1978 a question was asked by Hon'ble Member Shri G. L, Ashtekar. After the Minister gave the answer to the question Shri G. L. Ashtekar put a supplementary question in English. Hon'ble Minister for Rural Development started to reply the question in Kannnda. Hon'ble Member Shri B. B. Sayanak then urged that the reply should be given in English. He pleaded that the Minister was bound to answer the question in English as they did not understand Kannada. I ruled that the member could not insist